ಚರ್ಚ್‌ನ ಗಂಟೆ ಅನುರಣಿಸಿದ್ದೂ ದೇವಸ್ಥಾನದಲ್ಲಿ ಜಾಗಂಟೆ ಬಡಿದದ್ದೂ ಅವರ ಕಿವಿಗೆ ಕೇಳಿಸಲಿಲ್ಲ.

ಮರುದಿನ ಟೀಚರಮ್ಮ ದುಃಖಿಸುತ್ತಲೇ ಅಂಗಳವನ್ನು ಸ್ವಚ್ಛಗೊಳಿಸಿ ಮುರಿದ ಮಾವಿನಮರವನ್ನು ಕಡಿಯಲು ಊರ ಮಂದಿಯನ್ನು ಕಲೆ ಹಾಕಲು ಮುಂದಾದರು. ಆದರೆ ಆಕೆಯಿಂದ ಮಾವಿನ ಹಣ್ಣುಗಳನ್ನು ಒಯ್ದವರಲ್ಲಿ ಯಾರೊಬ್ಬರೂ ತಂತಮ್ಮ ಕೆಲಸಗಳ ಕಾರಣ ಹೇಳಿ ಆಕೆಯಲ್ಲಿಗೆ ಬರಲು ನಿರಾಕರಿಸಿದರು. ಶಂಭಟ್ಟರು ಮಾತ್ರ ಓಡೋಡುತ್ತಾ ಬಂದರು. ಅಂಗಳದಲ್ಲಿ ನಿಂತು ದಿಗ್ಭ್ರಾಂತರಾಗಿ 'ಅಯ್ಯೋ ದೇವರೇ. ನಾನು ಕುರುಕ್ಷೇತ್ರದ ಯುದ್ಧವನ್ನು ನೋಡಿಲ್ಲ. ಆದರೆ ಇಲ್ಲಿಯೇ ನಡೆದಂತಾಗಿದೆ' ಎಂದು ಟೀಚರಮ್ಮನನ್ನು ಸ್ವಾಂತನಗೊಳಿಸಿ 'ನನ್ನ ಕೆಲಸದ ಆಳುಗಳನ್ನು ಈ ದಿನ ಪೂರ್ತಿ ನಿಮ್ಮಲ್ಲಿಗೆ ಕಳುಹಿಸಿಕೊಡುತ್ತೇನೆ' ಎಂದು ಧೈರ್ಯ ತುಂಬಿದರು.

ತಿಂಗಳ ಮೇಲೆ ಸಿಸಿಲಾ ಟೀಚರಮ್ಮ ಸೀತಾಪುರದ ಸಂತೆಗೆ ಹೋದಾಗ 'ಹಣ್ಣು ಕೊಡಿ' ಎಂದು ಟೀಚರಮ್ಮನಲ್ಲಿಗೆ ವ್ಯಾಪಾರಕ್ಕೆ ಬಂದಿದ್ದ ಪೀರ್ ಸಾಬಿಯ ಅಂಗಡಿಯಲ್ಲಿ ಟೀಚರಮ್ಮನ ಅಂಗಳದಲ್ಲಿ ಬೆಳೆದಿದ್ದ ಹಣ್ಣುಗಳಂಥ ಮಾವಿನ ಹಣ್ಣುಗಳು ರಾರಾಜಿಸುತ್ತಿದ್ದುದ್ದನ್ನು ಟೀಚರಮ್ಮ ನೋಡಿದರು. 'ಇದು ಎಲ್ಲಿಂದ?' ಎಂದು ಸಾಬಿಯನ್ನು ಆಕೆ ಕೇಳುತ್ತಿದ್ದಂತೆ ಆತ 'ಯಾರಿಗೂ ಹೇಳಬಾರದು ಎಂದಿದ್ದಾರೆ ಸೇವಂತಿಯಕ್ಕ. ಇದು ಅವರ ತೋಟದಲ್ಲೇ ಬೆಳೆದದ್ದು ಮತ್ತು ಅದು ನೀವು ಕೊಟ್ಟ ಗಿಡದ್ದು' ಎಂದ.

### ಡಾ. ನಾ. ಮೊಗಸಾಲೆ

ನಾರಾಯಣ ಭಟ್ಟ ಮೊಗಸಾಲೆ ಹುಟ್ಟಿದ್ದು ಕಾಸರಗೋಡಿನ ಕೋಳ್ಯೂರಿನಲ್ಲಿ. ಸ್ಥಳೀಯ ಶಾಲೆಗಳಲ್ಲಿ ಶಿಕ್ಷಣ ಪಡೆದು, ಉಡುಪಿಯ ಆಯುರ್ವೇದ ಕಾಲೇಜಿನಿಂದ ಪದವಿ ಪಡೆದರು. ವೃತ್ತಿ ಬದುಕಿನ ಆರಂಭದಿಂದ ನಿವೃತ್ತಿಯ ತನಕ ಕಾರ್ಕಳ ತಾಲ್ಲೂಕಿನ ಕಾಂತಾವರದಲ್ಲಿ ವಾಸವಾಗಿದ್ದಾರೆ. ಅವರು ಈಗಲೂ ಅದೇ ಪುಟ್ಟ ಹಳ್ಳಿ ಕಾಂತಾವರದಲ್ಲಿದ್ದು ಅಲ್ಲಿನ ಕನ್ನಡ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ನಾಲ್ಕು ಲೇಖನಗಳ ಸಂಗ್ರಹ, ಆರು ಸಣ್ಣ ಕಥಾಸಂಗ್ರಹ, ಆರು ವೈದ್ಯಕೀಯ ಕೃತಿಗಳು, 11 ಕವನ ಸಂಗ್ರಹ, 17 ಕಾದಂಬರಿಗಳನ್ನು ಅವರು ಪ್ರಕಟಿಸಿದ್ದಾರೆ. ಕೆಲವು ಕೃತಿಗಳನ್ನು ಸಂಪಾದಿಸಿದ್ದಾರೆ. 'ತೊಟ್ಟಿ', 'ದೃಷ್ಟಿ', 'ಉಲ್ಲಂಘನೆ', 'ನನ್ನದಲ್ಲದ್ದು' ಅವರ ಕೆಲವು ಕಾದಂಬರಿಗಳು. 'ಬಯಲು ಬೆಟ್ಟ' ಅವರ ಆತ್ಮವೃತ್ತಾಂತ.